751 ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಗೆ ಪ್ರತಿನಿತ್ಯ ಅಗತ್ಯವಿರುವ ವಿದ್ಯುತ್ ಪ್ರಮಾಣವೆಷ್ಟು;

ಆ) ಈ ಪೈಕಿ ವಿದ್ಯುತ್ ಕಂಪನಿಗಳು ಜಿಲ್ಲೆಗೆ ನೀಡುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು;

ಇ) ಬೀದರ್ ಜಿಲ್ಲೆಯಲ್ಲಿ ಯಾವ ಯಾವ ಸಕ್ಕರೆ ಕಾರ್ಖಾನೆಗಳು ಎಷ್ಟೆಷ್ಟು ವಿದ್ಯುತ್ತನ್ನು ಉತ್ಪಾದನೆ ಮಾಡಿ ವಿದ್ಯುತ್ ಕಂಪನಿಗಳಿಗೆ ನೀಡುತ್ತಿವೆ, ಇವುಗಳಿಗೆ ಪ್ರತಿ ಯೂನಿಟ್ಟಿಗೆ ನೀಡುತ್ತಿರುವ ಹಣವೆಷ್ಟು;

ಈ) ಜಿಲ್ಲೆಯು ಪ್ರತಿದಿನ ಎದುರಿಸುತ್ತಿರುವ ವಿದ್ಯುತ್ ಕೊರತೆಯ ಪ್ರಮಾಣವೆಷ್ಟು, ಈ ಕೊರತೆಯನ್ನು ನೀಗಿಸಲು ಸರ್ಕಾರದ ಕ್ರಮಗಳೇನು;

ಉ) ಜಿಲ್ಲೆಯು ತೀವ್ರವಾದ ವಿದ್ಯುತ್ ಕೊರತೆಯನ್ನು ಎದುರಿಸುತ್ತಿದ್ದು ಇದನ್ನು ಪರಿಹರಿಸುವ ಸಲುವಾಗಿ ಬೀದರ್ ಜಿಲ್ಲೆಯಲ್ಲಿ ಶಾಖೋತ್ಪನ್ನ ಅಥವಾ ಜಲ ವಿದ್ಯುತ್ ಉತ್ಪಾದನೆಯನ್ನು ಸರ್ಕಾರದ ವತಿಯಿಂದ ಅಥವಾ ಖಾಸಗಿ ಕಂಪನಿಗಳಿಂದ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಊ) ಹಾಗಿದ್ದಲ್ಲಿ, ಇಲ್ಲಿಯವರೆವಿಗೂ ಯಾವುದಾದರೂ ಖಾಸಗಿ ಕಂಪನಿಗಳು ವಿದ್ಯುತ್ ಉತ್ಪಾದನೆ ಪ್ರಾರಂಭಿಸಲು ಮುಂದೆ ಬಂದಿದೆಯೇ, ಬಂದಿದ್ದಲ್ಲಿ, ವಿವರಗಳೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) ಬೀದರ್ ಜಿಲ್ಲೆಗೆ ಪ್ರತಿನಿತ್ಯ ಬೇಕಾಗಿರುವ ವಿದ್ಯುತ್ ಪ್ರಮಾಣ 140–150 ಮೆಗಾವ್ಯಾಟ್ /3.6 ಮಿಲಿಯನ್ ಯೂನಿಟ್ಟುಗಳು.

ಆ) ಈ ಪೈಕಿ ಪ್ರಸ್ತುತ ಬೀದರ್ ಜಿಲ್ಲೆಗೆ 114–138 ಮೆಗಾವ್ಯಾಟ್/2,664 ಮಿಲಿಯನ್ ಯೂನಿಟ್ ವಿದ್ಯುತ್ತನ್ನು ನೀಡಲಾಗುತ್ತಿದೆ.

ಇ) ಬೀದರ್ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆಯಿಂದ ಪ್ರತಿ ಯೂನಿಟ್‌ಗೆ ರೂ.4.30 ರಂತೆ ತಿಂಗಳಿಗೆ 0.27 ಮಿಲಿಯನ್ ಯೂನಿಟ್‌ಗಳು ಹಾಗೂ ನಾರಂಜ ಸಹಕಾರ ಸಕ್ಕರೆ ಕಾರ್ಖಾನೆ ಪ್ರತಿ ಯೂನಿಟ್‌ಗೆ ರೂ.2.91 ರಂತೆ 0.50 ಮಿಲಿಯನ್ ಯೂನಿಟ್‌ಗಳ

ವಿದ್ಯುತ್ ಉತ್ಪಾದನೆ ಮಾಡಿ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಗೆ ಸರಬರಾಜು ಮಾಡುತ್ತಿದೆ.

ಇ) ಹಾಲಿ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಗೆ ಲಭ್ಯವಿರುವ ವಿದ್ಯುತ್ತಿನ ಪ್ರಮಾಣದ ಪ್ರಕಾರ ಬೀದರ್ ಜಿಲ್ಲೆಗೆ ಸುಮಾರು 25 ಮೆ.ವ್ಯಾ.ಟ್ ವಿದ್ಯುತ್ ಪ್ರಮಾಣದ ಕೊರತೆ ಇರುತ್ತದೆ. ಹೆಚ್ಚಿನ ವಿದ್ಯುತ್ ಉತ್ಪಾದನೆಯಾದಾಗ ಲಭ್ಯತೆಯನ್ನು ಆಧರಿಸಿ ಬೀದರ್ ಜಿಲ್ಲೆಯ ಕೊರತೆ ಪ್ರಮಾಣವನ್ನು ಕಡಿಮೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು..

ಉ) ಇಲ್ಲ

ಊ) ಉದ್ಭವಿಸುವುದಿಲ್ಲ.

796 ಶ್ರೀ ಶ್ರೀನಿವಾಸ್ ಎಂ.(ಮಂಡ್ಯ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ವಿಧಾನ ಸಭಾ ಕ್ಷೇತ್ರದಲ್ಲಿರುವ ಒಟ್ಟು ವಿದ್ಯುತ್ ಉಪ ಕೇಂದ್ರಗಳ ಸಂಖ್ಯೆ ಎಷ್ಟು ಮತ್ತು ಅವು ಎಲ್ಲಿವೆ (ವಿವರಗಳನ್ನು ನೀಡುವುದು);

ಆ) ಕಳೆದ ಮೂರು ವರ್ಷದಲ್ಲಿ ಮಂಡ್ಯ ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರಾದ ಹೊಸ ವಿದ್ಯುತ್ ಉಪ ಕೇಂದ್ರಗಳು ಎಷ್ಟು ಮತ್ತು ಯಾವುವು (ವಿವರಗಳನ್ನು ನೀಡುವುದು)

ಇ) ಮಂಡ್ಯ ವಿಧಾನ ಸಭಾ ಕ್ಷೇತ್ರದಲ್ಲಿರುವ ಎಲ್ಲಾ ವಿದ್ಯುತ್ ಉಪ ಕೇಂದ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ಮಂಡ್ಯ ವಿಧಾನ ಸಭಾ ಕ್ಷೇತ್ರದಲ್ಲಿರುವ ಹಲವು ವಿದ್ಯುತ್ ಉಪ ಕೇಂದ್ರಗಳು ದುರಸ್ಥಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಇವುಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಋ) ಮಂಡ್ಯ ವಿಧಾನಸಭಾ ಕ್ಷೇತ್ರಕ್ಕೆ ಹೊಸದಾಗಿ ವಿದ್ಯುತ್ ಉಪಕೇಂದ್ರಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ೠ) ಹಾಗಿದ್ದಲ್ಲಿ, ಎಂದು ನೀಡಲಾಗುವುದು (ವಿವರ ನೀಡುವುದು);